ಮನವಿಗಳು

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಉಪಾಧ್ಯಕ್ಷರೇ, ಮುಂದಿನ ಕಾರ್ಯಕಲಾಪಗಳಿಗೆ ಪ್ರವೇಶ ಮಾಡುವ ಮೊದಲು ನಾನು ಒಂದು ಮಾತು ಹೇಳಬೇಕಾಗಿದೆ. ನಾವು ನಿನ್ನೆ ದಿವಸ ಕಾಲಿಂಗ್ ಅಟೆನ್‌ಷನ್ ಮತ್ತು ಇತರ ಕಾರ್ಯಕಲಾಪಗಳು ಇಂದು ಬೇಡ ಎಂದು ಒಪ್ಪಿಕೊಂಡಿದ್ದೆವು. ಅದರ ವಿಚಾರ ನಾನು ಪ್ರಸ್ತಾಪ ಮಾಡುವುದಿಲ್ಲ. ಆದರೆ ಈ ಬೆಂಗಳೂರು ನಗರದಲ್ಲಿ ಮತ್ತು ಕಾರವಾರದಲ್ಲಿ ಕೆಲವು ಘಟನೆಗಳು ನಡೆದಿವೆ. ಅದು ತೀವ್ರ ಸ್ವರೂಪದಲ್ಲಿ ನಡೆದಿವೆ, ಅದು ಸಾರ್ವಜನಿಕರ ಗಮನವನ್ನು ಸೆಳೆಯತಕ್ಕಂಥಾ ಘಟನೆಗಳು.....

ಉಪಾಧ್ಯಕ್ಷರು.—ಅದರ ಬಗ್ಗೆ ನೋಟೀಸ್ ಕಳುಹಿಸಿಕೊಡಿ. ಈಗ ಶೂನ್ಯ ವೇಳೆಯಲ್ಲಿ ಅದನ್ನು ಪ್ರಸ್ತಾಪ ಮಾಡಬಾರದಲ್ಲಾ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇವೇನೂ ಹೊಸದಲ್ಲ. ಹಾಗೆ ಇಲ್ಲದಿದ್ದರೂ ಅನೇಕ ಸಂದರ್ಭಗಳಲ್ಲಿ ಇಂಥಾ ವಿಷಯಗಳನ್ನು ಪ್ರಸ್ತಾಪ ಮಾಡಿರುವುದೂ ಉಂಟು. ಆದರಿಂದ ಹೇಳುತ್ತಿದ್ದೇನೆ, ಸ್ವಾಮಿ, ೧೫ನೇ ತಾರೀಖು ರಾತ್ರಿ ೧೦–೪೫ರ ವೇಳೆಯಲ್ಲಿ ಯಶವಂತಪುರದಲ್ಲಿ ಇರತಕ್ಕಂಥಾ ದಲಿತರ ಕೇರಿಗೆ ಹೋಗಿ ಅಲ್ಲಿ ಮುನಿಯಪ್ಪ ಎಂಬುವನನ್ನು ಕೆಲವರು ಬಡಿದಿದ್ದಾರೆ...

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ, ಏನೆಂದರೆ ಈ ಶೂನ್ಯವೇಳೆಯಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಬಾರದು. ಅದಕ್ಕೆ ನೋಟೀಸ್ ಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.--ಅದು ಕ್ರಿಯಾಲೋಪವಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಶೂನ್ಯ ವೇಳೆಯಲ್ಲಿ ಅಂತಹ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ನಾನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ. ಹೊಸ ನಿಯಮಾವಳಿಗಳ ಪ್ರಕಾರ ಹಾಗೆ ಎತ್ತುವುದಕ್ಕೆ ಅವಕಾಶ ಇಲ್ಲ. ಅದಕ್ಕೆ ನೋಟೀಸ್ ಬೇಕು ಪ್ರಾಸಂಗಿಕವಾಗಿ ಮಾನ್ಯ ವಿರೋಧಪಕ್ಷದ ನಾಯಕರು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ ಅಷ್ಟೆ, ಹಿಂದೆ ಇದ್ದಂಥಾ ನಿಯಮಾವಳಿಗಳಲ್ಲಿ ಶೂನ್ಯವೇಳೆ ಇತ್ತು. ಹೊಸ ನಿಯಮಾವಳಿಗಳ ಪ್ರಕಾರ ಇಂತಹ ವಿಚಾರಗಳನ್ನು ಎತ್ತಲಿಕ್ಕೆ ೩೫ನೇ ರೂಲ್ ಪ್ರಕಾರ ನೋಟೀಸ್ ಕೊಡಬೇಕು. ಹಾಗೆ ನೋಟೀಸ್ ಕೊಡದೇನೇ ಇಂತಹ ವಿಚಾರಗಳನ್ನು ಎತ್ತಲಿಕ್ಕೆ ಅವಕಾಶವಿಲ್ಲ. ಈ ವಿಚಾರ ಅವರಿಗೂ ಗೊತ್ತಿದೆ. ಯಾವುದೋ ಒಂದು ನೆಪ ಮಾಡಿಕೊಂಡು ಅಡ್ಜರ್ನ್‌ಮೆಂಟ್ ಮೋಷನ್ ರೂಪದಲ್ಲಿ ಇದಕ್ಕೆ ಒಂದು ರೂಪವನ್ನು ಕೊಡುವುದಕ್ಕೆ ರೂಲ್ ಪ್ರಕಾರ ಅವಕಾಶ ಇಲ್ಲ, ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದಕಾರಣ ಮುಂದಿನ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಿದಂಥ ರೂಲ್‌ನ ವಿಚಾರ ಹೊಸದೇನೂ ಅಲ್ಲ. ಹಿಂದಿನ ಕಾರ್ಯಕಲಾಪಗಳಲ್ಲಿಯೂ ಇದು ಇತ್ತು. ಮಾರ್ಚ್ ೧೫ ರಂದು ಹತ್ತುಮುಕ್ಕಾಲು ಗಂಟೆಯ ಸಮಯದಲ್ಲಿ ಸುಮಾರು ೩೦೦ ಜನ ದುಷ್ಕರ್ಮಿಗಳು ಹರಿಜನರಿರತಕ್ಕ ಕಾಲೋನಿಗೆ ಪ್ರವೇಶ ಮಾಡಿ ಮುನಿಯಪ್ಪ ಎನ್ನುವವನನ್ನು ಥಳಿಸಿದ್ದಾರೆ. ಇದನ್ನು ತಪ್ಪಿಸಲಿಕ್ಕೆ ಹೋದಂಥ ಮುನಿರಾಜು, ಕೆಂಪರಾಜು ಮತ್ತು ಕೃಷ್ಣಮೂರ್ತಿ ಎನ್ನುವವರ ಕಣ್ಣಿಗೆ ಖಾರದ ಪುಡಿಯನ್ನು ಎರಚಿ, ಚಾಕು, ಕೈನು, ಬೆಲ್ಟ್ ಮತ್ತು ದೊಣ್ಣೆಗಳಿಂದ ಅವರನ್ನು ಥಳಿಸಿ ದೊಡ್ಡ ಗಂಪ ಮಾಡಿದ್ದಾರೆ. ಈ ವಿಷಯ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿಯೂ ಕೂಡ ಬಂದಿದೆ. ನಾನು ನಿನ್ನೆಯ ದಿವಸವೂ ಕೂಡ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆನು. ಸರ್ಕಾರದವರು ಈ ವಿಷಯಗಳ ಬಗ್ಗೆ ಕೂಡಲೇ ಗಮನ ತೆಗೆದುಕೊಂಡು ರಕ್ಷಣೆಗೆ ಹೋಗಬೇಕು. ಸುಲ್ತಾನಹಳ್ಳಿಯಲ್ಲಿ ಯಾವ ತರಹ ಕೆಲವು ದುಷ್ಕರ್ಮಿಗಳು ಹರಿಜನರ ಕೇರಿಗೆ ಹೋಗಿ ಸಾಕಷ್ಟು ತೊಂದರೆಗಳನ್ನು ಮಾಡಿದ್ದಾರೆ. ಆದರೂ ಸರ್ಕಾರದಿಂದ ಇವತ್ತಿನವರೆಗೂ ಕೂಡ ಇವರಿಗೆ ರಕ್ಷಣೆ ಇಲ್ಲ. ಹರಿಜನರ ಬೀದಿಯಲ್ಲಿ ಇವತ್ತು ಭೀತಿಯ ವಾತಾವರಣ ಕೂಡ ಸೃಷ್ಟಿಯಾಗಿದೆ.

ಇನ್ನು ಕಾರವಾರ ಜಿಲ್ಲೆಯಲ್ಲಿ ಆದಂಥ ಘಟನೆಯು ನಿನ್ನೆಯ ದಿವಸದ 'ಉದಯವಾಣಿ' ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆಯೂ ಸಹ ನಾನು ಸರ್ಕಾರಕ್ಕೆ ಹೇಳಿದ್ದೇನೆ. ಮೂರು ಜನ ಪೋಲೀಸರು ಅಲ್ಲಿ ಒಬ್ಬ ಹುಡುಗಿಯ ಮೇಲೆ ಅತ್ಯಾಚಾರ ಮಾಡಿದ್ದು ಪಾತ್ರವಲ್ಲದೆ ಆ ಹುಡುಗಿ ಇಪತ್ತಿನವರೆಗೂ ಕಾಣೆಯಾಗಿದ್ದಾಳೆ. ಆದರೆ ಇಂಥಾದ್ದನ್ನು ಇಲ್ಲಿ ಹೇಳುವುದಕ್ಕೂ ಅವಕಾಶವಿಲ್ಲದಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ಸರ್ಕಾರದವರು, ನಾವು ನೋಟೀಸ್ ಕೊಡಬೇಕು ನಂತರ ಅವರು ಉತ್ತರ ಕೊಡಬೇಕು ಎಂದು ಹೇಳುವುದು ಇದೆ, ಆದರೆ ನಾವು ಇಲ್ಲಿ ಹೇಳುವ ವಿಷಯಗಳನ್ನು ಹೇಳಲೇಬೇಕಾಗುತ್ತದೆ. ಸುಲ್ತಾನಪಾಳ್ಯ ಮತ್ತು ಯಶವಂತಪುರಗಳಲ್ಲಿ ಏನು ಘಟನೆಗಳು ನಡೆದಿವೆ ಇವುಗಳ ಬಗ್ಗೆ ಸರ್ಕಾರದವರು ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕಾದ ಅಗತ್ಯ ಇದೆ. ಅದನ್ನು ತಾವು ಮೊದಲು ಮಾಡಬೇಕು. ಕಾರವಾರದ ವಿಚಾರದಲ್ಲಿಯೂ ಕೂಡ ಆ ಹುಡುಗಿ ಕಾಣೆಯಾಗಿದ್ದಾಳೆ ಮೂರು ಜನ ಪೋಲೀಸರು ಹುಡುಗಿಯ ಮೇಲೆ ಅತ್ಯಾಚಾರ ಮಾಡಿದ್ದಾರೆ ಎನ್ನುವ ದೂರು ಕೂಡ ಇದೆ. ಪತ್ರಿಕೆಯಲ್ಲಿ ಇದರ ಬಗ್ಗೆ ಸಾಕಷ್ಟು ವಿವರಣೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆಯೂ ಸಹ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡ ಬಗ್ಗೆ ಯಾವ ವರದಿಯೂ ಇಲ್ಲ. ಅಥವಾ ಹುಡುಗಿಯನ್ನು ಪತ್ತೆಹಚ್ಚುವ ಬಗ್ಗೆಯೂ ಸರ್ಕಾರದಿಂದ ವರದಿಯಿಲ್ಲ. ನಾನು ಈಗ ಪ್ರಸ್ತಾಪ ಮಾಡಿರುವ ಎಲ್ಲಾ ವಿಚಾರಗಳ ಬಗ್ಗೆಯೂ ಸರ್ಕಾರದವರು ಮಾಹಿತಿಯನ್ನು ಪಡೆದು ಕೂಡಲೇ ಸೂಕ್ತ ಪರಿಹಾರ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು ಮೂರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸುಲ್ತಾನಪಾಳ್ಯದಲ್ಲಿ ನಡೆದಿರುವ ಘಟನೆ, ಯಶವಂತಪುರದಲ್ಲಿ ನಡೆದಿರುವ ಘಟನೆ, ಮತ್ತು ಕಾರವಾರದಲ್ಲಿ ನಡೆದಿರುವ ಘಟನೆ. ಕಾರವಾರದ ಘಟನೆ ಬಗ್ಗೆ ನಮಗೆ ಇನ್ನೂ ಮಾಹಿತಿ ಬರಬೇಕಾಗಿದೆ. ಮಾಹಿತಿ ಬಂದಮೇಲೆ ನಾವು ಒಂದು ಹೇಳಿಕೆಯನ್ನು ಈ ಬಗ್ಗೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗ ನಾನು ಯಶವಂತಪುರದ ಘಟನೆಯ ಬಗ್ಗೆ ಮಾತ್ರ ಹೇಳುತ್ತೇನೆ. ನಾನು ಘಟನೆ ನಡೆದಂಥ ಸ್ಥಳಕ್ಕೆ ಹೋಗಿಬಂದಿದ್ದೇನೆ. ಅಲ್ಲಿ ನಾವು ಈಗಾಗಲೇ ವ್ಯವಸ್ಥಿತವಾದ ಕಾರ್ಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರ ನೋಟೀಸ್ ಈ ಬಗ್ಗೆ ನಮಗೆ ಬಂದ ತಕ್ಷಣ ನಾವು ಸೂಕ್ತವಾದಂಥ ಹೇಳಿಕೆಯನ್ನು ಕೊಡುತ್ತೇವೆ.

ಶ್ರೀ ಕೆ. ರಾಮಭಟ್.—ಡಾ. ಅಂಬೇಡ್ಕರ್ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡುತ್ತಿದ್ದಾರೆ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಆದರೂ ಸಹ ಯಾವ ಕ್ರಮವನ್ನೂ ಇದುವರೆಗೂ ತೆಗೆದುಕೊಂಡಿಲ್ಲ. ಈ ಸಮಸ್ಯೆಯನ್ನು ಶೀಘ್ರವಾಗಿ ಪರಿಹರಿಸಲಿಕ್ಕೆ ಕ್ರಮ ತೆಗೆದುಕೊಳ್ಳುವುದರ ಬಗ್ಗೆ ಆಶ್ವಾಸನೆಯನ್ನು ಕೊಡುತ್ತಾರೆಯೇ ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಸಂಬಂಧಪಟ್ಟ ಮಂತ್ರಿಗಳು ಇಲ್ಲ. ಇದರ ಬಗ್ಗೆಯೂ ಸಹ ನಾವು ವಿವರಗಳನ್ನು ತರಿಸಿಕೊಂಡು ಉತ್ತರವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸ್ವಾಮಿ, ವಿಷದ ಆಹಾರವನ್ನು ಮೇನಕಾಗಾಂಧಿಯವರಿಗೆ ಒದಗಿಸಿದ್ದರ ಬಗ್ಗೆ ಪತ್ರಿಕೆಯಲ್ಲಿ ವರದಿ ಬಂದಿದೆ, ಇದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಇದರ ಬಗ್ಗೆಯೂ ನಮಗೆ ಯಾವ ದೂರೂ ಬಂದಿಲ್ಲ. ಬಂದ ತಕ್ಷಣ ಇದನ್ನೂ ಸಹ ನೋಡುತ್ತೇವೆ.